






# ಸೂಪರ್‌ಸಾನಿಕ್ ಕಾರು!

ನಮಗೆಲ್ಲ ತಿಳಿದಂತೆ ಶಬ್ದದ ವೇಗ ಸೆಕೆಂಡಿಗೆ 343.59 ಮೀ.ಅಂದ್ರೆ ಗಂಟೆಗೆ 1,236ಕಿ.ಮೀ. ಇಂಥ ಶಬ್ದ ತರಂಗಗಳು ಪಯಣಿಸುವ ವೇಗವನ್ನು ಸರಿಗಟ್ಟೋ ಸೂಪರ್‌ಸಾನಿಕ್ ಏರ್‌ಕ್ರಾಫ್ಟ್‌ಗಳ ಬಗ್ಗೆ ಕೇಳಿದ್ದೇವೆ. ಆದರೆ ಅವೆಲ್ಲವನ್ನೂ ಮೀರಿಸಿ ಮುನ್ನುಗ್ಗಬಲ್ಲ ಸೂಪರ್‌ಸಾನಿಕ್ ಕಾರೊಂದನ್ನು ರೂಪಿಸುವ ಕಾರ್ಯದಲ್ಲಿ ಬ್ರಿಸ್ಟಲ್ ಕೇಂದ್ರದ ನಿಪುಣರು ನಿರತರಾಗಿದ್ದಾರೆ. ಅದರ ಹೆಸರೇ 'ಬ್ಲಡ್ ಹೌಂಡ್' ಇದರ ಪರೀಕ್ಷಾ ಕಾರ್ಯ ದಕ್ಷಿಣ ಆಫ್ರಿಕಾದ ಉತ್ತರ ಕೇಪ್ ಟೌನಿನ ಹಕ್ಕಿನ್ ಪಾನ್ ಎಂಬಲ್ಲಿ ನಡೆದಿದೆ.

ಬ್ರಿಟನ್‌ಗೆ ಸೇರಿದ ಏರೋಸ್ಪೇಸ್ ಕಂಪನಿಯವರು ಈ ಯೋಜನೆಯಲ್ಲಿ ಪಾಲುದಾರರು. ಈ ಕಾರಿನ ಉದ್ದ 42 ಅಡಿ, 9ಅಡಿ ಎತ್ತರ, ಮತ್ತು 7.7ಟನ್ ಭಾರ ಇರುತ್ತದೆ!

ಇದರ ಮುಂಭಾಗ ರೇಸಿಂಗ್ ಕಾರಿನಂತೇ ಇದ್ದು ಕಾರ್ಬನ್ ಫೈಬರ್‌ನಿಂದ ಮಾಡಲ್ಪಟ್ಟಿದ್ದು ಹಿಂಭಾಗವು ಏರ್‌ಕ್ರಾಫ್ಟ್ ಮಾದರಿಯಲ್ಲಿ ಲೋಹದ ಪ್ಯಾನಲ್‌ಗಳ ರೀತಿ ಇರುತ್ತದೆ. ಈ ಹಿಂದಿನ ಅನುಭವಗಳನ್ನು ಆಧಾರವಾಗಿಟ್ಟುಕೊಂಡು ಇದರ ರಚನೆಗೆ ಟೈಟಾನಿಯಮ್ ಅನ್ನು ಬಳಸುತ್ತಿದ್ದಾರೆ. ಜುಲೈ-ಆಗಸ್ಟ್ ವೇಳೆಗೆ ರನ್ ವೇ ಪರೀಕ್ಷಾ ಕಾರ್ಯ ನಡೆದು ನವೆಂಬರ್ ವೇಳೆಗೆ ಬಳಕೆಗೆ ಬರಬಹುದು ಎಂಬುದು ನಿಪುಣರ ಅಂದಾಜು. 2016ಕ್ಕಂತೂ ಇದು ವಿಶ್ವದಲ್ಲೇ ಗಂಟೆಗೆ 1,610ಕಿ.ಮೀ ವೇಗದಲ್ಲಿ ಸಾಗಬಲ್ಲ ನಂ.1 ಸೂಪರ್‌ಸಾನಿಕ್ ಕಾರ್ ಆಗುವುದಂತೂ ಖಂಡಿತ!

ಈ ಕಾರಿನ ಚಾಲಕನಾಗಿ ರಾಯಲ್ ಏರ್‌ಫೋರ್ಸ್‌ನ ಪೈಲಟ್ ಆಗಿದ್ದ ಆಂಡಿ ಗ್ರೀನ್ ಸಜ್ಜಾಗುತ್ತಿದ್ದಾರೆ. ಈ ಹಿಂದೆ 1,228 ಕಿ.ಮೀ.ವೇಗದಲ್ಲಿ ಸಾಗಿದ್ದ "ಥ್ರಸ್ಟ್ ಎಸ್ ಎಸ್ ಸಿ" ಕಾರ್ ಅನ್ನು ಚಲಾಯಿಸಿದ ಅನುಭವವಿದೆ.

■ **ಬಿ. ಹನುಮಂತ ಭಟ್**